ಶ್ರೀ
ಶ್ರೀ ಗುರುಭ್ಯೋ ನಮಃ

## ಶ್ರೀ ರಾಘವೇಂದ್ರ ಸ್ವಾಮಿಗಳವರ ನಾಮಾವಳಿ
### (೧೦೮ ಅಷ್ಟೋತ್ತರ ಶತನಾಮ ಸ್ಮರಣೆ )

ಜಯ ಜಯವೀವೆ ರಾಘವೇಂದ್ರ । ಭಯ ಭಯ ನಾಶಕ ರಾಘವೇಂದ್ರ ।
ತುಂಗಾತೀರದಿ ರಾಘವೇಂದ್ರ । ಮಂಗಳ ಮಹಿಮನೆ ರಾಘವೇಂದ್ರ ।
ಅಂಗರಹಿತರಿಗೆ ರಾಘವೇಂದ್ರ । ತಿಮ್ಮಣ್ಣನ ಸುತ ರಾಘವೇಂದ್ರ ।
ಕಂಗಳಿಲ್ಲದವರಿಗೆ ರಾಘವೇಂದ್ರ । ಬೊಮ್ಮ ಮಾರುತಿ ಪ್ರಿಯ ರಾಘವೇಂದ್ರ ।
ವೇಂಕಟನಾಮಕ ರಾಘವೇಂದ್ರ । ಸಂಕಟ ಹಾರಕ ರಾಘವೇಂದ್ರ ।
ವೀಣಾ ಪಂಡಿತ ರಾಘವೇಂದ್ರ । ಗಾನ ವಿಶಾರದ ರಾಘವೇಂದ್ರ ।
ಸರಸ್ವತಿಯಾಪತಿ ರಾಘವೇಂದ್ರ । ಸರಸ್ವತಿ ವಿದ್ಯಾ ರಾಘವೇಂದ್ರ ।
ಕುಂಭಕೋಣವಾಸ ರಾಘವೇಂದ್ರ । ಸುಧೀಂದ್ರರ ಶಿಷ್ಯ ರಾಘವೇಂದ್ರ ।
ಪರಿಮಳ ಪಂಡಿತ ರಾಘವೇಂದ್ರ । ಭಾಷ್ಯಕಾರ ಗುರು ರಾಘವೇಂದ್ರ ।
ಶಿಷ್ಯರ ವಿದ್ಯೆ ರಾಘವೇಂದ್ರ । ಆಯಾಸದಿಂ ಬರೆ ರಾಘವೇಂದ್ರ ।
ಗಂಧವ ತೆಗೆಯೆನೆ ರಾಘವೇಂದ್ರ । ಅಗ್ನಿ ಸೂಕ್ತದಿಂ ರಾಘವೇಂದ್ರ ।
ವಿಪ್ರರು ಲೇಪಿಸಿ ರಾಘವೇಂದ್ರ । ಕ್ಷಿಪ್ರದಿ ಮೈಯುರಿ ರಾಘವೇಂದ್ರ ।
ಶರಣು ಹೋಗಲು ರಾಘವೇಂದ್ರ । ವರುಣಸೂಕ್ತದಿಂ ರಾಘವೇಂದ್ರ ।
ಚಂದನವಾಯಿತು ರಾಘವೇಂದ್ರ । ಸುತನಿಗೆ ಮುಂಜಿಯು ರಾಘವೇಂದ್ರ ।
ಸನ್ಯಾಸಿಯಾಗಲು ರಾಘವೇಂದ್ರ । ಶಾರದೆಯಾಜ್ಞೆಯು ರಾಘವೇಂದ್ರ ।
ಆಶ್ರಮ ಧರಿಸಿದ ರಾಘವೇಂದ್ರ । ಪಿಶಾಚಿಯಾಗೆ ಸತಿ ರಾಘವೇಂದ್ರ ।
ಮೋಕ್ಷವ ಗೈಸಿದ ರಾಘವೇಂದ್ರ । ಚತುಃಷಷ್ಟಿ ಕಲೆಯಿಂದ ರಾಘವೇಂದ್ರ ।
ಅತುಳ ಪ್ರಕಾಶನು ರಾಘವೇಂದ್ರ । ಮೊದಲಿನ ಗುರುಗಳು ರಾಘವೇಂದ್ರ ।
ಯಾದವೇಂದ್ರರು ರಾಘವೇಂದ್ರ । ಅಧಿಕಾರ ನಮ್ಮದು ರಾಘವೇಂದ್ರ ।
ಅಧಿಕ ತೊಂದರೆ ಕೊಡೆ ರಾಘವೇಂದ್ರ । ಹರಿಯ ಸ್ಮರಿಸಲು ರಾಘವೇಂದ್ರ ।
ಪರಿಹಾರವಾಯಿತು ರಾಘವೇಂದ್ರ । ಬಡವೆಂಕಣ್ಣಗೆ ರಾಘವೇಂದ್ರ ।
ಒಡೆಯನ ದಯೆಯಿಂದ ರಾಘವೇಂದ್ರ । ದಿವಾನಗಿರಿ ಬರೆ ರಾಘವೇಂದ್ರ ।
ದಿವಾನ ದೊರೆಗಳೆ ರಾಘವೇಂದ್ರ । ಮುಸಲ್ಮಾನ ದೊರೆ ರಾಘವೇಂದ್ರ ।
ತಟ್ಟೆಲಿ ಭೋಜನ ರಾಘವೇಂದ್ರ । ಬಟ್ಟೆಯ ಮುಚ್ಚಿರೆ ರಾಘವೇಂದ್ರ ।
ತೀರ್ಥವ ಪ್ರೋಕ್ಷಿಸೆ ರಾಘವೇಂದ್ರ । ತಟ್ಟೆಲಿ ಫಲಪುಷ್ಪ ರಾಘವೇಂದ್ರ ।
ವಂದಿಸಿದನು ದೊರೆ ರಾಘವೇಂದ್ರ । ಮಾನ್ಯಗಳನು ಕೊಡೆ ರಾಘವೇಂದ್ರ ।
ದೊರೆಯಾ ನೆನಪಿಗೆ ರಾಘವೇಂದ್ರ । ಗೋಪುರವಿರಿಸಿದ ರಾಘವೇಂದ್ರ ।
ವೆಂಕಣ್ಣಗೆ ಪೇಳೆ ರಾಘವೇಂದ್ರ । ಮಾಧವಾರಾದಿ ರಾಘವೇಂದ್ರ ।
ಕೇರಿ ಏರಿಯ ಮೇಲೆ ರಾಘವೇಂದ್ರ । ಕರಿಯಾ ಶಿಲೆಯೊಳು ರಾಘವೇಂದ್ರ ।
ವೃಂದಾವನ ಮಾಡಿ ರಾಘವೇಂದ್ರ । ಉಳಿದಾ ಶಿಲೆಯೊಳು ರಾಘವೇಂದ್ರ ।
ಮಾರುತಿಯನು ಮಾಡಿ ರಾಘವೇಂದ್ರ । ಕೀರುತಿ ಪಡೆದನು ರಾಘವೇಂದ್ರ ।
ಉತ್ತಮ ದಿನದೊಳು ರಾಘವೇಂದ್ರ । ಶಿಷ್ಯರಿಗ್ಹೇಳುತ ರಾಘವೇಂದ್ರ ।
ದಕ್ಷಿಣದ್ವಾರದಿ ರಾಘವೇಂದ್ರ । ಆ ಕ್ಷಣ ಹೊಕ್ಕರು ರಾಘವೇಂದ್ರ ।
ಒಂದು ದಿನ ಶ್ರೀಗಳು ರಾಘವೇಂದ್ರ । ಮದುವೆಗೆ ಶಿಷ್ಯ ಕೇಳೆ ರಾಘವೇಂದ್ರ ।
ಮೃತ್ತಿಕೆ ಕೊಡಲಾಗಿ ರಾಘವೇಂದ್ರ । ದ್ವಜಗ ಜಗುಲಿಯೊಳಗೆ ರಾಘವೇಂದ್ರ ।
ಬ್ರಹ್ಮಪಿಶಾಚವು ರಾಘವೇಂದ್ರ । ಮೃತ್ತಿಕೆ ಭರದಿಂದ ರಾಘವೇಂದ್ರ ।
ಸುಟ್ಟು ಬೂದಿಯಾಗೆ ರಾಘವೇಂದ್ರ । ಶಿಷ್ಯನ ಮದುವೆಯು ರಾಘವೇಂದ್ರ ।
ರತ್ನಾಹಾರ ಭರದಿಂದ ರಾಘವೇಂದ್ರ । ಅಗ್ನಿಯೊಳಿಟ್ಟರು ರಾಘವೇಂದ್ರ ।
ಹಾರಬೇಕನ್ನಲು ರಾಘವೇಂದ್ರ । ಕುಂಡದಿ ತೆಗೆದರು ರಾಘವೇಂದ್ರ ।

www.vijayadasaru.net

ನೀರಿನವನು ಕೇಳೆ ರಾಘವೇಂದ್ರ । ಮೋಕ್ಷ ಬೇಕೆನ್ನಲು ರಾಘವೇಂದ್ರ ।
ಮುಕ್ತಿಯನಿತ್ತರು ರಾಘವೇಂದ್ರ । ದೇಶಶಾಯಿ ಒಂದು ದಿನ ರಾಘವೇಂದ್ರ ।
ಗುರುಗಳ ಕರೆಸಲು ರಾಘವೇಂದ್ರ । ಮಾವಿನ ರಸದೊಳು ರಾಘವೇಂದ್ರ ।
ಆಡುವ ಮಗು ಬೀಳೆ ರಾಘವೇಂದ್ರ । ಮಗು ಮೃತಿಹೊಂದಲು ರಾಘವೇಂದ್ರ ।
ಅಂದು ವ್ಯರ್ಥಿಸಿದರು ರಾಘವೇಂದ್ರ । ರಾಮನ ದಯೆಯಿಂದ ರಾಘವೇಂದ್ರ ।
ಜೀವವನಿತ್ತರು ರಾಘವೇಂದ್ರ । ಪರಿಜನ ಹರುಷದಿ ರಾಘವೇಂದ್ರ ।
ತರಳನ ಕರೆದರು ರಾಘವೇಂದ್ರ । ಗುರುಗಳು ಕರುಣಿಸಿ ರಾಘವೇಂದ್ರ ।
ಪ್ರಾಣವನಿತ್ತರು ರಾಘವೇಂದ್ರ । ಒನಕೆ ಚಿಗುರಿಸಿ ರಾಘವೇಂದ್ರ ।
ವಿಪ್ರರಿಗೆ ಸಿರಿ ಬಂತು ರಾಘವೇಂದ್ರ । ಶಿಷ್ಯನ ಮಗನೊಬ್ಬ ರಾಘವೇಂದ್ರ ।
ಬಿಸಿಲಲಿ ಬಳಲಲು ರಾಘವೇಂದ್ರ । ಶಾಟಿಲಿ ನೆರಳನು ರಾಘವೇಂದ್ರ ।
ಇಚ್ಛಾ ಭೋಜನ ರಾಘವೇಂದ್ರ । ಜಾತಕ ಬರೆಯಲು ರಾಘವೇಂದ್ರ ।
ಒಂದುನೂರು ಮನುಜಂಗೆ ರಾಘವೇಂದ್ರ । ಮೂರುನೂರು ಗ್ರಂಥಕೆ ರಾಘವೇಂದ್ರ ।
ಬೃಂದಾವನ ಕೇಳು ನೂರು ರಾಘವೇಂದ್ರ । ಪರಿಪರಿ ರೋಗಹರ ರಾಘವೇಂದ್ರ ।
ಜಯಜಯ ಮಂಗಳ ರಾಘವೇಂದ್ರ । ನಿತ್ಯಾನಂದದೊಳು ರಾಘವೇಂದ್ರ ।
ಜಯಜಯ ವಿಠಲದಾಸ ರಾಘವೇಂದ್ರ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥